DW1

ಅಸಲ ದಾವಾ ನಂ. 285/2013

## ಮೆ:: ಸಿವ್ಹಿಲ್ ನ್ಯಾಯಾಧೀಶರ ನ್ಯಾಯಾಲಯ ಬಸವನ ಬಾಗೇವಾಡಿ

## ಇವರ ನ್ಯಾಯಾಲಯದಲ್ಲಿ

1) ತಿಪ್ಪಣ್ಣ ತಂ. ಸಿಗೊಂಡಪ್ಪ ಮುದಕವಿ

ಹಾಗೂ ಇನ್ನೊಬ್ಬರು --ವಾದಿಯರು

ವಿರುದ್ಧ

1) ಮಾಯಪ್ಪ ತಂ. ಭೀಮಪ್ಪ ಮುದಕವಿ --ಪ್ರತಿವಾದಿ

CIVIL JUDGE AND JMFC COURT, BASAVAN BAGEWADI 08 JUL 2025 Sheristedar (Adm)

## ಸಿವ್ಹಿಲ್ ಪ್ರಕ್ರಿಯಾ ಸಂಹಿತೆ ಆದೇಶ 18 ನಿಯಮ 4 ರ ಕೆಳಗೆ ಪ್ರತಿವಾದಿಯ ನುಡಿ

## ಸಾಕ್ಷಿ ಸ್ವರೂಪದ ಪ್ರಮಾಣ ಪತ್ರ

ಇದರಲ್ಲಿ ನಾನು ಮಾಯಪ್ಪ ತಂ. ಭೀಮಪ್ಪ ಮುದಕವಿ ವಯಾ : 58 ವರ್ಷ ಉದ್ಯೋಗ : ಶೇತ್ಕಿ ಸಾ॥ ತಡಲಗಿ ತಾ॥ ಕೋಲ್ಹಾರ ಇಂದು ಬಸವನಬಾಗೇವಾಡಿಯಲ್ಲಿ ಹೀಗೆ ಸತ್ಯ ಪ್ರತಿಜ್ಞೆ ಮಾಡಿ ಹೇಳುತ್ತೇನಲ್ಲಾ.

ದಾವಾದಲ್ಲಿ ನಾನು ಪ್ರತಿವಾದಿ ಇದ್ದೇನೆ, ವಾದಿಯ ಪರಿಚಯವಿದೆ. ದಾವಾದ ಮಾಹಿತಿ ಇರುತ್ತದೆ.

ವಾದಿಯರ ವಾದಪತ್ರದಲ್ಲಿಯ ವಿಷಯಗಳು ಸಂಪೂರ್ಣ ಸುಳ್ಳು ಹಾಗೂ ಬನಾವಟಿ ಸಂಗತಿಗಳಿಂದ ಕೂಡಿದ್ದು ಇರುತ್ತವೆ. ವಾದಪತ್ರದಲ್ಲಿಯ ಒಪ್ಪದೇ ಇರುವ ಅಂಶಗಳನ್ನು ನಾನು ನಿರಾಕರಿಸುತ್ತೇನೆ ಅಂತಾ ಮೆ|ಕೋರ್ಟನವರು ಪರಿಗಣಿಸಬೇಕು.

ವಾದಿಯ ವಾದಪತ್ರದ ಪ್ಯಾರಾ 2 ರಲ್ಲಿ ಕಾಣಿಸಿದ ವಿಷಯಗಳು ಸುಳ್ಳು ಇರುತ್ತವೆ. ತಡಲಗಿ ಗ್ರಾಮದ ಸರ್ವೆ ನಂ. 55 ರಲ್ಲಿ ಒಟ್ಟು 6 ಪಟ್ಟಿಗಳು ಆಗಿರುತ್ತವೆ. ಕ.ಸ.ನಂ. 55/1ಎ ಬಸಪ್ಪ ಬಾಳಪ್ಪ ಮುದಕವಿ ಈತನ ಜಮೀನು ಕ.ಸ.ನಂ. 55/2ಬಿ ಬಾಳಪ್ಪ ಹಾಗೂ ಸಿದ್ದಪ್ಪ ಮುದಕವಿ ಇವರ ಹೆಸರಿನಲ್ಲಿ ಇರುತ್ತವೆ. ಕ.ಸ.ನಂ. 55/3 ಮಾಯಪ್ಪ ತಂ. ಭೀಮಪ್ಪ ಮುದಕವಿ ಅಂದರೆ ನನ್ನ ಹೆಸರಿನಲ್ಲಿ ಇರುತ್ತದೆ. ಕ.ಸ.ನಂ. 55/2 1ನೇ ವಾದಿ ಹಾಗೂ ಅವರ ಮನೆಯ ಸದಸ್ಯರ ಕಬ್ಜಾ ವಹಿವಾಟಿಯಲ್ಲಿ ಇರುತ್ತದೆ. ಕ.ಸ.ನಂ.

No. of Corrections Nil
Sheristedar (Adm)

ಮಾಯಪ್ಪ. ಭಿ. ಮುದಕವಿ

55/4ಎ ಇದು ಶರಣಪ್ಪ ಹಾಗೂ ಗೌರವ್ವ ಇವರ ಕಬ್ಜಾ ವಹಿವಾಟಿಯಲ್ಲಿ ಇರುತ್ತದೆ. ಕ.ಸ.ನಂ. 55/4ಬಿ ಇದು ಶರಣಪ್ಪ ಮುದಕವಿ ಈತನ ಕಬ್ಜಾ ವಹಿವಾಟಿಯಲ್ಲಿ ಇರುತ್ತದೆ. ದಾವಾ ಜಮೀನುಗಳ ಹಾಗೂ ಉಳಿದ ಜಮೀನುಗಳ ವಸ್ತುಸ್ಥಿತಿ ತೋರಿಸುವ ಸಲುವಾಗಿ ಮೆ:ಕೋರ್ಟಿಗೆ ನಾನು ಹಾತ ನಕಾಶೆಯನ್ನು ಹಾಜರಪಡಿಸಿದ್ದು ಸದರ ಹಾತ ನಕಾಶೆಯನ್ನು ಪ್ರತಿವಾದ ಪತ್ರದ ಒಂದು ಭಾಗವೆಂದು ಮೆ:ಕೋರ್ಟಿನವರು ಪರಿಗಣಿಸಬೇಕು. ನಾನು ಹಾಜರಪಡಿಸಿದ ಹಾತ ನಕಾಶೆಯಲ್ಲಿ ನಮೂದ ಮಾಡಿದ ಎ.ಬಿ.ಸಿ.ಡಿ ಕ್ಷೇತ್ರ ನನ್ನ ಜಮೀನು ಇರುತ್ತದೆ. ವಾದಿಯು ಅನ್ನುವಂತೆ ನನ್ನ ಜಮೀನದ ಪಶ್ಚಿಮ ಬಾಂಧಿನಲ್ಲಿ ವಾದಿಯರು ಎಂದು ಗಳೆ, ಗಾಡಿ, ಧನಕರು ತೆಗೆದುಕೊಂಡು ಹೋಗಿ ಬರುವುದು ಮಾಡಿರುವುದಿಲ್ಲ. ಮೂಲತಃ ಸರ್ವೆ ನಂ. 55 ಇದ್ದಾಗ ತಡಲಗಿಯಿಂದ ನಾಗರದಿನ್ನಿ ರಸ್ತೆ ಗುಂಟ ಬಂದು ಶರಣಪ್ಪನ ಪಾಲಿಗೆ ಬಂದ ಜಮೀನದ ಪೂರ್ವ ಭಾಗದಲ್ಲಿ ಹಾಯ್ದು ಹೋಗುತ್ತಿದ್ದರು. ಈಗ ಸುಮಾರು 10 ವರ್ಷದ ಹಿಂದೆ ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳವಾಡ ಏತ ನೀರಾವರಿಯ ಕಾಲುವೆ ಹಾಯ್ದು ಹೋಗಿರುತ್ತದೆ. ಕಾಲುವೆಯ ಎರಡು ಬದಿಗೆ ರಸ್ತೆ ಇದ್ದು ಸದರ ಕಾಲುವೆಯ ಪಶ್ಚಿಮ ದಿಕ್ಕಿಗೆ ರಸ್ತೆ ಇದ್ದು ಅದನ್ನು ಎಮ್.ಎನ್.ಓ.ಪಿ ಅಂತಾ ಪ್ರತಿವಾದ ಪತ್ರದ ಜೊತೆಗೆ ಹಾಜರಪಡಿಸಿದ ಹಾತ ನಕಾಶೆಯಲ್ಲಿ ನಮೂದ ಮಾಡಲಾಗಿದೆ. ಸದರ ಎಮ್.ಎನ್.ಓ.ಪಿ ರಸ್ತೆಗುಂಟ ವಾದಿಯರು ಹಾಗೂ ಉಳಿದ ಪಟ್ಟಿಯವರು ಗಳೆ, ಗಾಡಿ, ದನಕರು ತೆಗೆದುಕೊಂಡು ಹಾಯ್ದು ಹೋಗುತ್ತಾ ಬಂದಿರುತ್ತಾರೆ.

ವಾದಿಯು ತನ್ನ ವಾದಪತ್ರದ ಪ್ಯಾರಾ 3 ರಲ್ಲಿ ನನ್ನ ಜಮೀನದ ಪಶ್ಚಿಮ ದಿಕ್ಕಿನಲ್ಲಿ ರಸ್ತೆ ಅಂತಾ ತೋರಿಸುತ್ತಾರೆ. ಅಲ್ಲಿ ರಸ್ತೆ ಇರುವುದಿಲ್ಲ ನಾನು 10 ವರ್ಷಗಳ ಹಿಂದೆ ನನ್ನ ಜಮೀನದ ಪಶ್ಚಿಮ ಬಾಂಧಿನಲ್ಲಿ ನೀರು ಸಂಗ್ರಹ ಮಾಡುವ ಸಲುವಾಗಿ ನೀರಿನ ಟಾಕಿ ಮಾಡಿರುತ್ತಾನೆ. ಅದರ ಬಗ್ಗೆ ವಾದಿಯರು ಎಲ್ಲಿಯೂ ಪ್ರಸ್ತಾಪ ಮಾಡಿರುವುದಿಲ್ಲ. ಹೀಗಾಗಿ ದಾವಾದ ದಾರಿ ಅಂತಾ ವಾದಿಗೆ ಅನ್ನಲು ಯಾವುದೇ ಹಕ್ಕು ಇರುವುದಿಲ್ಲ.

ವಾದಿಯು ತನ್ನ ವಾಪದತ್ರದ ಪ್ಯಾರಾ ನಂ. 4 ರಲ್ಲಿ ವಾದಿಯರ ತಮ್ಮ ಪರವಾಗಿ ಹಾಗೂ ಇನ್ನೊಬ್ಬ ತಮ್ಮನಾದ ಪೂಜಪ್ಪ ಇವನ ಪರವಾಗಿ ಹಾಗೂ ಕುಟುಂಬದ ಸದಸ್ಯರ ಪರವಾಗಿ ದಾವೆ ಮಾಡಿರುತ್ತಾರೆ ಅನ್ನುವುದು ಸುಳ್ಳು, ಉಳಿದ ಜಮೀನುಗಳ ಮಾಲೀಕರು ಹಾಗೂ ವಾದಿಯರ ಮನೆಯ ಉಳಿದ ಸದಸ್ಯರು ವಾದಿಯರಿಗೆ ದಾವಾ ಮಾಡಲು

No. of Corrections Nil

Sheristedar (Adm)

ಶರಣಪ್ಪ. ಬಿ. ಮುದಕವಿ

ಯಾವುದೇ ರೀತಿ ಅಧಿಕಾರ ಕೊಟ್ಟಿರುವುದಿಲ್ಲ. ವಾದಿಯರ ಜಮೀನದ ಪೂರ್ವ ದಿಕ್ಕಿಗೆ ಹಾಗೂ ಕಾಲುವೆಯ ಪಶ್ಚಿಮ ದಿಕ್ಕಿಗೆ ಎಮ್.ಎನ್.ಓ.ಪ್ಪಿ ಅಂತಾ ರಸ್ತೆ ಇದ್ದು ಆ ರಸ್ತೆಗುಂಟ ವಾದಿಯರು ಹಾಗೂ ಉಳಿದ ಸದಸ್ಯರು ಹಾಯ್ದು ಹೋಗಿ ಬರುವುದು ಮಾಡುತ್ತಾರೆ. ವಾದಿಯು ತನ್ನ ವಾದಪತ್ರದ ಪ್ಯಾರಾ 4 ರಲ್ಲಿ ಮುಂದುವರೆದು ಆಪಾಧಿಸಿದಂತೆ ವಾದಿಯರ ಜಮೀನಕ್ಕೆ ಹೊಂದಿ ---- ತಿಪ್ಪಣ್ಣ ಪೂಜಪ್ಪ ಅಂತಾ ಮಕ್ಕಳು ಅಂತಾ ಕಾಣಿಸಿದ ವಿಷಯ ನಿಜ ಇರುತ್ತದೆ. ಸರ್ವೆ ನಂ. 55 ರಲ್ಲಿ 3 ಪಟ್ಟಿಗಳು ಅಂತಾ ಕಾಣಿಸಿದ್ದು ಸುಳ್ಳು, ಅಲ್ಲಿ 6 ಪಟ್ಟಿಗಳು ಇರುತ್ತವೆ. ವಾದಿಯರು ಮುಂದುವರೆದು ಆಪಾಧಿಸಿದಂತೆ ಮನೆತನದ ಮೂಲ ಪುರುಷರೆಲ್ಲರೂ ತಮ್ಮ ತಮ್ಮ ಮಾಲ್ಕಿ ಹಕ್ಕಿನ ಜಮೀನುಗಳಿಗೆ ಹೋಗಿ ಬಂದು ಮಾಡಲು ಹಾತ ನಕಾಶೆಯಲ್ಲಿ ತೋರಿಸಿದಂತೆ ಅನುಸರಿಸುತ್ತಾ ಬಂದರು ಅನ್ನುವುದು ಸುಳ್ಳು, ಮೂಲ ಪುರುಷರ ಮರಣಾ ನಂತರ ತಂಟೆ ತಕರಾರು ಪ್ರಾರಂಭವಾಯಿತು ಅನ್ನುವುದು ಸುಳ್ಳು, ಮನೆತನದ ಮೂಲ ಪುರುಷರಾಗಲಿ ವಾದಿಯರಾಗಲಿ ಪ್ರತಿವಾದಿಯ ಜಮೀನದ ಯಾವುದೇ ಭಾಗದಲ್ಲಿ ರಸ್ತೆ ಅಂತಾ ನಿರ್ಮಾಣ ಮಾಡಿರುವುದಿಲ್ಲ. ದಿನಾಂಕ : 10-09-1994 ರಂದು ಪ್ರತಿವಾದಿಯು ಯಾವುದೇ ರೀತಿಯ ಕಬಲಾಯತಿ ಪತ್ರ ಬರೆದುಕೊಟ್ಟಿರುವುದಿಲ್ಲ ಸುಳ್ಳು ಕಾಗದ ಪತ್ರಗಳನ್ನು ಸೃಷ್ಟಿ ಮಾಡಿರುತ್ತಾರೆ.

ವಾದಿಯರ ವಾದಪತ್ರದ ಪ್ಯಾರಾ 5 ರಲ್ಲಿ ಕಾಣಿಸಿದ ವಿಷಯಗಳು ಸಂಪೂರ್ಣ ಸುಳ್ಳು ಇರುತ್ತವೆ. ಪ್ರತಿವಾದಿಯ ಜಮೀನದ ಪಶ್ಚಿಮ ಭಾಗಕ್ಕೆ ವಾದಿಯರಾಗಲಿ ಇಲ್ಲವೇ ಬೇರೆ ಯಾರೇ ಆಗಲಿ ದನ ಕರು, ಗಳೆ ಗಾಡಿ ತೆಗೆದುಕೊಂಡು ಹೋಗಿ ಬಂದಿರುವುದಿಲ್ಲ. ಪಶ್ಚಿಮ ದಿಕ್ಕಿಗೆ ನೀರಿನ ಟಾಕಿ ಇರುವುದರಿಂದ ಹಾಯ್ದು ಹೋಗಲು ಬರುವುದಿಲ್ಲ. ವಾದಿಯರು ಅನ್ನುವಂತೆ ಅನಾಧಿಕಾಲದಿಂದ ಹಾಯ್ದು ಹೋಗಿರುವುದಿಲ್ಲ. ಹಕ್ಕಿನಿಂದಲೂ ರಸ್ತೆ ಮಾಡಿರುವುದಿಲ್ಲ. ರಸ್ತೆ ಮಾಡುವ ಪ್ರಸಂಗವೂ ಬಂದಿರುವುದಿಲ್ಲ. ವಾದಿಯರು ಗಳೆ, ಗಾಡಿ, ಧನ ಕರುಗಳನ್ನು ತೆಗೆದುಕೊಂಡು ದಕ್ಷಿಣೋತ್ತರವಾಗಿ ಇರುವ ಕಾಲುವೆಯ ಪಶ್ಚಿಮ ದಿಕ್ಕಿಗೆ ಇರುವ ರಸ್ತೆ ಗುಂಟ ಹಾಯ್ದು ಹೋಗುತ್ತಾರೆ. ವಾದಿಯರು ಪ್ರತಿವಾದಿಯು ತನ್ನ ಹಾತ ನಕಾಶೆಯಲ್ಲಿ ಕಾಣಿಸಿದ ಎಕ್ಸ್.ವೈ ಎಂಬ ಸ್ಥಳದಲ್ಲಿ ಗುಡಿಸಲು ಹಾಕಿಕೊಂಡು ವಾಸವಾಗಿರುತ್ತಾರೆ. ವಾದಿಯರು ಹಾಗೂ ಅವರ ಮನೆಯ ಸದಸ್ಯರು ಮತ್ತು ವಾದಿ

No. of Corrections Nil
Sheristedar (Adm.)

ನಮ್ಮ ಪೂರ್ವಜರು ನಮ್ಮ ಪಾಲಿಗೆ ಬಂದ ಜಮೀನಿನ ಪಶ್ಚಿಮ ದಿಕ್ಕಿಗೆ ರಸ್ತೆ ಅಂತಾ ನಿರ್ಮಾಣ ಮಾಡಿರಲಿಲ್ಲ. ಹಾಗೂ ಹಾಯ್ದು ಹೋಗಿರುವುದಿಲ್ಲ.

ಪ್ರತಿವಾದ ಪತ್ರದೊಂದಿಗೆ ದಾಖಲಾತಿಗಳನ್ನು ಹಾಜರಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಗಳೆಂದು ಗುರ್ತಿಸಲು ಜೊತೆಗೆ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಿ ಆದೇಶ ಮಾಡಬೇಕೆಂದು ಮಾಡಿದ ವಿನಂತಿ ಪ್ರಮಾಣ ಪತ್ರ.

ಮೇಲೆ ಪ್ರಮಾಣ ಪತ್ರದಲ್ಲಿ ಬರೆದ ಯಾವತ್ತೂ ಮಾಹಿತಿ ವ ಸಂಗತಿಗಳು ನಾನೇ ಹೇಳಿ ಬರೆಯಿಸಿದ್ದು, ಅವುಗಳು ನಿಜವೆಂದು ಒಪ್ಪಿ ನಾನು ನನ್ನ ಸಹಿ ಮಾಡಿರುತ್ತೇನೆ.

ಬಸವನ ಬಾಗೇವಾಡಿ

ದಿನಾಂಕ : 08-07-2026

ಪ್ರತಿಜ್ಞಾಧಾರಕ

ಸದರಿ ಪ್ರತಿಜ್ಞಾಧಾರಕನ ಪರಿಚಯವಿದೆ.

ಶ್ರೀ.ಸಿ.ಆರ್.ಸುಭಾನೆಪ್ಪರ

ವಕೀಲರು ಬಸವನಬಾಗೇವಾಡಿ

No. of Corrections One only

Sheristedar (Adm.)

...affirmed / sworn to before me this the 08th day of July 2026 ... ents of the ... to the ... Kannada ... to hi... Signed in ... CRS Adv.

Place: B. Bagewadi

Date: 8-7-2026

Civil Judge (Jr. Dn.) & JMFC

B. Bagewadi

ಓ.ಎಸ್ಃ 285/2013

ಡಿ.ಡಬ್ಲ್ಯೂಃ 01

**ದಿನಾಂಕಃ 08.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಖ್ಯವಿಚಾರಣೆ 1ನೇ ಪ್ರತಿವಾದಿಯರ ಪರ ಶ್ರೀ.ಸಿ.ಆರ್.ಎಸ್. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ. ಸದರಿ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಅದರಲ್ಲಿ ಬರೆದಿರುವ ಸಂಗತಿಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ನ್ಯಾಯಾಲಯಕ್ಕೆ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಗಿದೆ.

1. ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

**ವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

8/7/26

**(ಶ್ರೀ ಅಮಿತ್ ಘಟ್ಟಿ)**

**ದಿವಾಣಿ ನ್ಯಾಯಾಧೀಶರು ಮತ್ತು**

**ನ್ಯಾಯಿಕ ದಂಡಾಧಿಕಾರಿಗಳು**

**ಬಸವನ ಬಾಗೇವಾಡಿ.**